ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ದಿನಾಂಕ ೩೦ನೇ ಜನವರಿ ೧೯೮೬ ಗುರುವಾರ ಮಾಘ ೧೦,೧೯೦೭. ಶಕ

ವಿಧಾನಸೌಧದಲ್ಲಿರುವ, ವಿಧಾನ ಸಭೆಯ ಸಭಾಂಗಣದಲ್ಲಿ

ಸದನವು ಬೆಳಿಗ್ಗೆ ೧೧-೦೦ ಗಂಟೆ ೧೦ ನಿಮಿಷಕ್ಕೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದ್ದರು.]

ಅಧ್ಯಕ್ಷರು.— ಈಗ ಪ್ರಶ್ನೋತ್ತರಗಳು

ವಂನವಿಗಳು

ಸದನದಲ್ಲಿ ಮೌನಾಚರಣೆ ಮಾಡುವ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ (ವಿರೋಧಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೇ, ಪ್ರಶ್ನೋತ್ತರವನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ಒಂದು ವಿಚಾರವನ್ನು ತಮ್ಮ ಮುಂಖಾಂತರ ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಇವೊತ್ತಿನ ದಿವಸ ೧೧ಗಂಟೆಗೆ ಮೌನಾಚರಣೆಯನ್ನು ಮಾಡತಕ್ಕ ವಿಚಾರ ತಮಗೆಲ್ಲರಿಗೂ ಗೊತ್ತಿರತಕ್ಕದ್ದು. ಇವತ್ತಿನದಿವಸ ಶಾಸನಸಭೆಯಲ್ಲಿ ಮೌನಾಚರಣೆಯನ್ನು ಮಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಡುತ್ತಾರೆ ಎಂದು ತಿಳಿದುಕೊಂಡು ನಾವು ೧೧ ಗಂಟೆಗೆ ಸರಿಯಾಗಿ ಇಲ್ಲಿಗೆ ಬಂದಿದ್ದೆವು. ಸೈರನ್ ೧೧ ಗಂಟೆಗೆ ಕೂಗಿತು. ಆ ಸಮಯದಲ್ಲಿ ತಾವೂ ಇರಲಿಲ್ಲ, ಬೇರೆ ಯಾರೂ ಇರಲಿಲ್ಲ, ಆಗ ನಾವು ಎದ್ದು ಮೌನಾಚರಣೆ ಮಾಡಿದೆವು. ಮೌನಾಚರಣೆ ಮಾಡಲು ಹೊರಗಡೆ ಕಾರ್ಯಕ್ರಮ ಹಾಕಿದ್ದಾರೆ ಎಂದು ತಿಳಿದು ಬಂತು.

ಅಧ್ಯಕ್ಷರು.— ಅದನ್ನು ನಾವು ಮಾಡಲಿಲ್ಲ, ಗೌರ್ನಮೆಂಟ್‌ನವರು ಮಾಡಿದ್ದರು.

ಶ್ರೀ ಎಸ್. ಬಂಗಾರಪ್ಪ.—ಗೌರ್ನಮೆಂಟ್‌ನವರು ಮಾಡುವುದನ್ನು ಮಾಡಲಿ. ಆದರೆ ಈ ಸದನ ಮೌನಾಚರಣೆ ಮಾಡುವುದಕ್ಕೆ ಈ ಸದನದ ಒಳಗೆ ವ್ಯವಸ್ಥೆ ಮಾಡಬೇಕಾಗಿತ್ತು. ನಿನ್ನೆ ಈ ವಿಚಾರದಲ್ಲಿ ತಾವು ತಿಳಿಸಿ, ನಮಗೆ ಸುತ್ತೋಲೆಯನ್ನೂ ಕಳುಹಿಸಿದ್ದರೆ ಒಳ್ಳೆಯದಾಗುತ್ತಿತ್ತು.

ಅಧ್ಯಕ್ಷರು.— ನನಗೂ ಹಾಗೆ ಅನ್ನಿಸಿತು. ನಮ್ಮ ಆಫೀಸರ್ಸ್ ಯಾರೂ ಹೇಳಲಿಲ್ಲ. ಪೇಪರ್‌ನಲ್ಲಿ ನೋಡಿದಾಗ ನನಗೆ ಇವೊತ್ತು ೧೧ ಗಂಟೆಗೆ ಮೌನಾಚರಣೆ ಇದೆ, ಗೌರ್ನಮೆಂಟ್‌ನವರು ವಿಧಾನ ಸೌಧದ ಮುಂಬೆ ಅರೇಂಜ್ ಮಾಡಿರುತ್ತಾರೆ ಎಂದು ಗೊತ್ತಾಯಿತು. ಅಲ್ಲಿಗೆ ನಾನೂ ಹೋದೆ. ತಾವು ಹೇಳಿದಹಾಗೆ ಇಲ್ಲಿ ಮಾಡಿದ್ದರೆ ಸರಿ ಇರುತ್ತಿತ್ತು.

ಶ್ರೀ ಎಸ್. ಬಂಗಾರಪ್ಪ.—ಎರಡೂ ಸದನಗಳು ಮೌನಾಚರಣೆ ಮಾಡುವುದರ ಮೂಲಕ ರಾಷ್ಟ್ರ ಪಿತನಿಗೆ ಗೌರವ ಸೂಚನೆ ಮಾಡತಕ್ಕದ್ದು ಸರಿಯಾದುದು.

ಅಧ್ಯಕ್ಷರು.— ಹಿಂದಿನ ಕನ್‌ವೆನ್‌ಷನ್ ಏನಿತ್ತು ?

ಶ್ರೀ ಎಸ್. ಬಂಗಾರಪ್ಪ.— ಹಿಂದಿನ ಕನ್‌ವೆನ್‌ಷನ್ ಏನಂ ಎಂಬುದು ನನಗೆ ಗೊತ್ತಿಲ್ಲ, ಆದರೆ ನಾವು ಮಾಡಬಹುದಾಗಿತ್ತು.

ಅಧ್ಯಕ್ಷರು.— ಮುಂದೆ ಮಾಡೋಣ, ನನಗೂ ಇದರ ಬಗ್ಗೆ ಕಲ್ಪನೆ ಇರಲಿಲ್ಲ. ನಾನು ಮಾನ್ಯ ಕಾರ್ಯದರ್ಶಿಯವರನ್ನು ಕೇಳಿದೆ, ಅವರು ಸರಕಾರದವರು ಅರೇಂಜ್ ಮಾಡಿದ್ದಾರೆ, ಅಲ್ಲಿಗೆ ಹೋಗ ಬೇಕೆಂದು ಹೇಳಿದರು. ಎಲ್ಲಾ ಶಾಸಕರಿಗೂ ತಿಳಿಸಿದ್ದೀರಾ ಎಂದು ಕೇಳಿದೆ ತಿಳಿಸಿರಬೇಕೆಂದು ಅವರು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.— ಯಾರೂ ಯಾರಿಗೂ ತಿಳಿಸಿಲ್ಲ, ಜನತಾ ಪಕ್ಷದ ಶಾಸಕ ಮಿತ್ರರಿಗೂ ತಿಳಿಸಿಲ್ಲ, ನಮ್ಮ ಪಕ್ಷದವರಿಗೂ ತಿಳಿಸಿಲ್ಲ, ಮಾನ್ಯ ಮಂತ್ರಿಗಳಿಗೂ ಕೂಡಾ ತಿಳಿಸಿಲ್ಲ. ನಾನು ಬರಂತ್ತಿರು ವಾಗ ಅವರು ದಾರಿಯಲ್ಲಿ ಸಿಕ್ಕಿದರು, ನಾನು ಅವರನ್ನು ಕೇಳಿದೆ. ಅವರೂ ನನಗೆ ಗೊತ್ತಿಲ್ಲ ಎಂದರು.

ಅಧ್ಯಕ್ಷರು.— ಹನ್ನೊಂದು ಗಂಟೆಗೆ ಐದು ಮಿನಿಟ್ ಇರುವಾಗ ಇಲ್ಲಿಗೆ ಬರಬೇಕೆಂದು ಇದ್ದೆ. ಇಲ್ಲಿಗೆ ಬರುವವರು, ಅಲ್ಲಿ ಅರೇಂಜ್ ಮಾಡಿದ್ದಾರೆ ಎಂದು ಗೊತ್ತಾದ ಮೇಲೆ ಅಲ್ಲಿಗೆ ಹೋದೆ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.— ತಾವೂ ಆರ್ಜೆಂಟಾಗಿ ಅಲ್ಲಿಗೆ ಹೋದಿರಿ ಎಂಬ ವಿಷಯ ತಿಳಿದು ಕೊಂಡೆ. ಆದರೆ ಇಲ್ಲಿ ವ್ಯವಸ್ಥೆ ಮಾಡದಿರುವುದು ಸರಿಯಲ್ಲ.

MR. SPEAKER.—Next time I will take care of it.

ನಿಮ್ಮೆಲ್ಲರ ಪರವಾಗಿ ನಾನು ಅಲ್ಲಿಗೆ ಹೋಗಿದ್ದೆ ಎಂದು ಭಾವಿಸುತ್ತೇನೆ. ನನಗೆ ಇದರ ಕಲ್ಪನೆ ಇರಲಿಲ್ಲ. ತಾವು ಹೇಳಿದ ಹಾಗೆ ಸದನದಲ್ಲಿ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು.

ಶ್ರೀ ಎಸ್. ಬಂಗಾರಪ್ಪ.— ಎರಡೂ ಸದನ ರಾಷ್ಟ್ರಪತಿನಿಗೆ ತಲೆಬಾಗಬೇಕು. ನಮ್ಮನ್ನು ಸಮರ್ಪಣೆ ಮಾಡಿಕೊಳ್ಳತಕ್ಕ ವಿಚಾರ ಇದು. ಇದರ ಬಗ್ಗೆ ಸುತ್ತೋಲೆ ಕಳುಹಿಸುತ್ತಾರೆ ಎಂಬ ವಿಚಾರವನ್ನು ನಾವು ಇಟ್ಟು ಕೊಂಡಿದ್ದೆವು. ಸರಕಾರವೂ ಮಾಡಲಿ. ಆದರೆ ಈ ಸದನದಲ್ಲೂ ವ್ಯವಸ್ಥೆ ಮಾಡಬೇಕಾಗಿತ್ತು. ಅಲ್ಲಿ ಮಾಡುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. ಮಾನ್ಯ ಮಂಖ್ಯಮಂತ್ರಿಗಳೂ ಅಲ್ಲಿಗೆ ಹೋಗಿದ್ದಾರೆ ಎಂಬುದು ಗೊತ್ತಾಯಿತು. ಹ್ಯಾಪಜಾರ್ಡ್ ಆಗಿ ಸರಕಾರ ಈ ರೀತಿ ಮಾಡ ತಕ್ಕದ್ದು, ಸದನ ಈ ರೀತಿ ಮಾಡತಕ್ಕದ್ದು ಸರಿಯಲ್ಲ.

ಅಧ್ಯಕ್ಷರು.— ನಾನೂ ಜಾಗ ಹುಡುಕಿಕೊಂಡು ಹೋದೆ.

ಶ್ರೀ ಎಸ್. ಬಂಗಾರಪ್ಪ.— ರಾಷ್ಟ್ರಪತಿನಿಗೆ ಗೌರವ ಅರ್ಪಿಸಬೇಕಾದ ವಿಚಾರ. ನಾವು ತಲೆ ತಗ್ಗಿಸಬೇಕಾದ ವಿಚಾರ ಆಗಿದೆ. ಈಗ ತಾವೂ ಒಪ್ಪಿದ್ದೀರಿ.

ಅಧ್ಯಕ್ಷರು — ಇಲ್ಲಿಯವರೆಗೆ ಕನ್‌ವೆನ್‌ಷನ್ ಮಾಡಿಲ್ಲ. ಇಲ್ಲಿ ಮಾಡತಕ್ಕ ಬಗ್ಗೆ ಕನ್‌ವೆನ್‌ಷನ್ ಮಾಡಬೇಕಾಗಿತ್ತು. ಹಿಂದಿನವರು ಮಾಡಿಲ್ಲ. ನಾನೂ ಏನೂ ಮಾಡಿಲ್ಲ. ಅಲ್ಲಿ ವ್ಯವಸ್ಥೆ ಮಾಡಿದ್ದಾರೆ ಎಂದಮೇಲೆ ನಾನು ಅಲ್ಲಿಗೇ ಹೋದೆ. ನಿನ್ನೆ ಪದ್ಧತಿ ಇದೆ ಎಂದು ಗೊತ್ತಾಗಿದ್ದರೆ ಇಲ್ಲಿಯೇ ಮಾಡ ಬಹುದಾಗಿತ್ತು.

ಶ್ರೀ ಎಸ್. ಬಂಗಾರಪ್ಪ.— ಅಲ್ಲಿ ಮಾಡಿದರೆ ಅದು ಸರಕಾರದ್ದಾಗುತ್ತದೆ. ಇಲ್ಲಿ ಮಾಡಿದರೆ, ಅದು ಸದನದ್ದಾಗುತ್ತದೆ.

ಶ್ರೀ ನಾರಾಯಣರಾವ್.— ಹೊರಗೆ ಮಾಡಿದರೆ ಜನಗಳ ಜೊತೆ ಸೇರಿಕೊಂಡು ಮಾಡಿದಹಾಗೆ ಆಗುತ್ತದೆ. ಸದನದಲ್ಲಿ ಮಾಡಿದರೆ ನಾವು ಅಷ್ಟೇ ಮಾಡಿದಹಾಗೆ ಆಗುತ್ತದೆ. ಆದ್ದರಿಂದ ಹೊರಗಡೆ ಜನಗಳ ಜೊತೆ ಸೇರಿಕೊಂಡು ಮಾಡುವುದು ಸೂಕ್ತ.

ಅಧ್ಯಕ್ಷರು.— ಆ ರೀತಿ ಕನ್‌ವೆನ್‌ಷನ್ ಇಲ್ಲ, ಯಾರೂ ಮಾಡಿಲ್ಲ ಎಂದು ಮಾಡಲಿಲ್ಲ ಅಷ್ಟೇ. ಇದು ನನ್ನ ಗಮನಕ್ಕೂ ಬರಲಿಲ್ಲ. ಬಹುತೇಕ ಇಲ್ಲಿಯೇ ಇರಬಹುದು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅಲ್ಲಿ ಇದೆ ಎಂದಮೇಲೆ ಅಲ್ಲಿಗೆ ಹೋದೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಬಂಗಾರಪ್ಪನವರು ಹೇಳಿದ ಮಾತಿಗೆ ಮನ್ನಣೆ ಕೊಟ್ಟು, ಮಂಂದಿನ ವರ್ಷ ಇದಂ ಇಲ್ಲಿ ಆಚರಣೆಯಾಗುತ್ತದೆಂದು ಹೇಳಿದ್ದೀರಿ. ತಾವೂ ಸಹ ಬಂದು ಬಿಟ್ಟು ಅಲ್ಲಿಗೆ ಹೋಗಿದ್ದೀರಿ ಎಂದಂ ಇಟ್ಟುಕೊಳ್ಳೋಣ. ಆದರೆ ಬಹಳ ಜನ ಬರಂತ್ತಾರೆ ಎಂದಂ ಹೊರಗಡೆ ಮಾಡಿದ್ದೇವೆ ಎಂದು ಹೇಳುವುದು ಸರಿಯಲ್ಲ. ಈ ಮನೆಗೆ ಸಾರ್ವಭೌಮತ್ವ ಇದೆ. ಕರ್ನಾಟಕ ರಾಜ್ಯದ ಸಾರ್ವಭೌಮತ್ವ ಇಲ್ಲಿದೆ. ನಾವು ಇಲ್ಲಿ ಮಾಡಿದರೆ ಇಡೀ ಕರ್ನಾಟಕ ರಾಜ್ಯದ ಎಲ್ಲರ ಪರವಾಗಿ ಮಾಡಿದಹಾಗೆ ಆಗುತ್ತದೆ.

ಅಧ್ಯಕ್ಷರು.— ನನಗೆ ಸಹಿತ ಇಂಟಿಮೇಷನ್ ಬಂದಿಲ್ಲ. ಸೆಕ್ರೆಟರಿಯವರು ಅಲ್ಲಿ ಇಟ್ಟಿದ್ದಾರೆ ಎಂದು ಹೇಳಿದಮೇಲೆ ಅಲ್ಲಿಗೆ ಹೋದರೆ. ನೆಕ್ಸ್ಟ್ ಟೈಮ್ ನಾನು ಇಲ್ಲಿ ಮಾಡುತ್ತೇನೆ.

ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೨೩(೧೭) ಮಾನ್ಯ ಸದಸ್ಯರು ಗೈರು ಹಾಜರಿ.

ಪ್ರಶ್ನೆ ಸಂಖ್ಯೆ ೧೨೪(೧೨೨) ಮಂಂದೂಡಲಾಗಿದೆ.ಅಧ್ಯಕ್ಷರು.—ಮಾನ್ಯ ಮೊಯಿನುದ್ದೀನ್‌ರವರೇ ತಮ್ಮ ಪ್ರಶ್ನೆಯನ್ನು ಮಂಂದೂಡಲಾಗಿದೆ.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಸಬ್‌ಮಿಷನ್ ಇದೆ. ಹೋದ ಅಧಿವೇಶನದಲ್ಲಿ ಇದೇ ಪ್ರಶ್ನೆ ಕೊಟ್ಟಿದ್ದೆ. ಆಗಲೂ ಸಹ ಇದಂ ಕ್ಯಾರೀಡ್ ಓವರ್ ಆಯಿತಂ. ಅಧಿವೇಶನ ಮುಗಿದು ಆಠು ತಿಂಗಳಾಗಿದೆ. ಇವತ್ತೂ ಸಹ ಕ್ಯಾರೀಡ್ ಓವರ್ ಎಂಡರೆ ಹೇಗೆ ? ಇದಂ ಬಹಳ ಪ್ರಾಮುಖ್ಯವಾದ ಕೊಶ್ಚನ್. ಎಲ್ಲರೂ ರೂರಲ್ ಪಾವರಿಟಿ ಮೇಲೆ ಮಾತ ನಾಡುತ್ತಾರೆಯೇ ಹೊರತು, ಅರ್ಬನ್ ಪಾವರ್ಟಿ ಮೇಲೆ ಯಾರೂ ಏನೂ ಮಾಡುತ್ತಿಲ್ಲ. ಈ ಕೊಶ್ಚನ್ ೮ ತಿಂಗಳಿಂದ ಕ್ಯಾರೀಡ್ ಓವರ್ ಆಗುತ್ತಿದೆ ಎಂದರೆ ಬಹಳ ಕಷ್ಟವಾಗಂತ್ತದೆ.

MR. SPEAKER.—I have taken care of your suggestion.

ಅಂತರ ರಾಜ್ಯ ಸಾರಿಗೆ ಪರವಾನಿಗೆಗಳು

೩೭೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯದ ನೆರೆಯ ರಾಜ್ಯಗಳು ಅಂದರೆ ತಮಿಳ್ನಾಡು, ಆಂಧ್ರ, ಮಹಾರಾಷ್ಟ್ರ, ಕೇರಳ ರಾಜ್ಯ ಗಳೊಡನೆ ಒಪ್ಪಂದ ಅಂತರ ರಾಜ್ಯ ಬಸ್ಸು ಮಾರ್ಗಗಳಿಷ್ಟಿವೆ ಹಾಗೂ ಲಾರಿಗಳಿಷ್ಟಿವೆ ?

ಆ) ಹಾಲಿ ಮಂಜೂರಾಗಿರುವ ಪರವಾನಿಗೆಗಳಿಗೆ ಅಂತರ ರಾಜ್ಯದ ಒಪ್ಪಂದ ಆಗಿದೆಯೆ ?

ಇ) ಹಾಗಿದ್ದಲ್ಲಿ, ಕೆ. ಎಸ್. ಆರ್. ಟಿ. ಸಿ. ಬಸ್‌ಗಳಿಗೆಷ್ಟಾಗಿದೆ ಹಾಗೂ ಖಾಸಗೀ ಬಸ್ಸು ಗಳಿಗೆಷ್ಟಾಗಿದೆ ಮತ್ತು ಲಾರಿಗಳಿಗೆಷ್ಟಾಗಿದೆ ?

ಈ) ೧೫ ಕಿಲೋಮೀಟರ್ ಒಳಗಾಗಿ ನೆರೆ ರಾಜ್ಯಗಳಿಗೆ ಹೋಗುವ ಬಸ್ಸುಗಳಿಗೆ ಎದುರು ರುಜು ಇಲ್ಲದೆ ಓಡಿಸಲು ಪರವಾನಿಗೆ ನೀಡುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು, ಹಾಗೂ ಈ ಬಗ್ಗೆ ನೆರೆ ರಾಜ್ಯಗಳೊಡನೆ ಒಪ್ಪಂದ ಆಗಿದೆಯೆ ?

ಉ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?